ಗರುಡಾಚಾರ್‌ಪಾಳ್ಯ ವಾರ್ಡ್ ನಂ.82 ರ ವಾರ್ಡ್ ಮಟ್ಟದ ಸಭೆಯನ್ನು ದಿನಾಂಕ:06.03.2021 ರಂದು ಸಭೆ ವಿರ್ಪಡಿಸಲಾಗಿತ್ತು.

| | | | |
|---|---|---|---|
| 1, | | | |
| 2, | Lakshminarayana | RI W. 82 | [signature] |
| 3. | BHASKAR | SWM W-82 | [signature] |
| 4. | RAVIPRAKASH | CPP-SWM | [signature] |
| 5 | RAVIndra | B.N.S.S.P | [signature] |
| 6 | Sm. Munijappa | S.W.M. | S.M. Munijappa |
| 7 | Srinivasa gowda N. | BMRCL | [signature] |
| 8 | M. SRINIVAS JE | BESCOM | [signature] |
| 9 | S. Shivakumar | Keerthi | [signature] |
| 10 | Bhagyalaxmi. | D.W.C.C. | Bhagya. |
| 11 | ಲಿಂಗರಾಜ್ | RLA-2 | [signature] |
| 12 | ARUN.M | BBMP (MARSHAL) | [signature] |
| 13 | S. ಮಂಜುನಾಥ | BBMP | [signature] |
| 14 | NAGARAJ.K | BBMP | [signature] |
| 15 | C.N. Venkatesh | public | [signature] |
| 16 | Vinay kumar C M | public | [signature] |

| | | | |
|---|---|---|---|
| 17. | Harish. N | Gr. Secretory Kaudinagara Sld[illegible] | Harish |
| 18 | ಶ್ಯಾಮಸುಂದರ ಪ್ರಕಾಶ | ಲೆಕ್ಕ ಸಹಾಯಕ | Sham |
| 19 | | | |
| 20 | | | |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/2ಬಿ/2020-21 ದಿನಾಂಕ: 06-03-2021.

**-:ದಿನಾಂಕ:06-03-2021 ರಂದು ನಡೆದ 82-ಗರುಡಚಾರ್‌ಪಾಳ್ಯ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020 ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:06-03-2021 ರ ಶನಿವಾರ ಅಪರಾಹ್ನ 3.00 ಘಂಟೆಗೆ ವಾರ್ಡ್ ನಂ.82-ಗರುಡಚಾರ್‌ಪಾಳ್ಯ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಂಟಿ ಆಯುಕ್ತರ, ಮಹದೇವಪುರ ವಲಯ ರವರ ಸಭಾಂಗಣದಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಗೆ ಹಾಜರಿದ್ದವರು:-

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ.ಸುಗುಣ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2 | ಶ್ರೀ.ಎಸ್.ವಿ.ಮಲ್ಲಪ್ಪ ದೇವಡು | ಕಾರ್ಯದರ್ಶಿಗಳು | ಹಾಜರಿದ್ದರು. |
| 3 | ಶ್ರೀ ಬಾಸ್ಕರ್ | (SWM) | ಹಾಜರಿದ್ದರು. |
| 4 | ಶ್ರೀ.ರವಿ ಪ್ರಕಾಶ್ | SWM-82 | ಹಾಜರಿದ್ದರು. |
| 5 | ಶ್ರೀ.ರವೀಂದ್ರ | BWSSB | ಹಾಜರಿದ್ದರು. |
| 6 | ಶ್ರೀ.ಎಸ್.ಎಂ.ಮುನಿಯಪ್ಪ | (SWM) | ಹಾಜರಿದ್ದರು. |
| 7 | ಶ್ರೀ.ಶ್ರೀನಿವಾಸ್ ಗೌಡ.ಎನ್ | BMRCL | ಹಾಜರಿದ್ದರು. |
| 8 | ಶ್ರೀ.ಶ್ರೀನಿವಾಸ್.ಎಂ | BSCOM | ಹಾಜರಿದ್ದರು. |
| 9 | ಶ್ರೀ.ಶಿವಕುಮಾರ್ | ಬೀದಿ ದೀಪ | ಹಾಜರಿದ್ದರು. |
| 10 | ಶ್ರೀಮತಿ.ಬಾಗ್ಯಲಕ್ಷ್ಮಿ | DWCC | ಹಾಜರಿದ್ದರು. |
| 11 | ಅಂಬರೀಶ್ | | ಹಾಜರಿದ್ದರು. |
| 12 | ಶ್ರೀ ಅರುಣ ಎಂ | ಮಾರ್ಷಲ್ | ಹಾಜರಿದ್ದರು. |
| 13 | ಶ್ರೀ.ಎಸ್.ಮಂಜುನಾಥ್ | ಬಿಬಿಎಂಪಿ | ಹಾಜರಿದ್ದರು. |
| 14 | ಶ್ರೀಮತಿ.ನಾಗರಾಜ್.ಕೆ. | DWCC | ಹಾಜರಿದ್ದರು. |
| 15 | ಶ್ರೀ.ಸಿ.ಎನ್.ವೆಂಕಟೇಶ್ | ಪಬ್ಲಿಕ್ | ಹಾಜರಿದ್ದರು. |
| 16 | ಶ್ರೀ.ವಿನಯ್ ಕೆ.ವಿ | ಪಬ್ಲಿಕ್ | ಹಾಜರಿದ್ದರು. |
| 17 | ಹರೀಶ್.ಎನ್ | ಸದಸ್ಯರು | ಹಾಜರಿದ್ದರು. |
| 18 | ಶಾಮಸುಂದರ ಪುರಾಣಿಕ | ಲಕ್ಷ್ಮಿಸಾಗರ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ಹಾಲಿ ಟಾರ್ಗೆಟ್ 250 ನೀಡಲಾಗಿದ್ದು, ಸದರಿ ಟಾರ್ಗೆಟ್‌ನಂತೆ ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ವಾರ್ಡ್ ನಂ.82 ವ್ಯಾಪ್ತಿಯಲ್ಲಿ ಮಾಂಸದ ಅಂಗಡಿಗಳ ತ್ಯಾಜ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ದೂರಿದ್ದು, ಮಾರ್ಷಲ್ ರವರಿಗೆ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಹಸಿ ಕಸ ಮತ್ತು ಒಣ ಕಸಗಳನ್ನು ಮನೆಗಳ ಹಂತದಲ್ಲೆಯೇ ವಿಗಂಡಿಸಿ ಕೊಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆರೋಗ್ಯ ಇಲಾಖೆಗೆ ಸೂಚಿಸಲಾಯಿತು.

**ಕಂದಾಯ:-**

- ವಾರ್ಡ್ ವ್ಯಾಪ್ತಿಯ ಕಂದಾಯ ವಸೂಲಾತಿ ಬಗ್ಗೆ ಉಪಸ್ಥಿತರಿದ್ದ ಕಂದಾಯ ಪರಿವೀಕ್ಷಕರಾದ ಶ್ರೀ.ಲಕ್ಷ್ಮಿನಾರಾಯಣ ರವರು ಈ ವರ್ಷದ ಒಟ್ಟು ಕಂದಾಯ ಬೇಡಿಕೆ ದಿನಾಂಕ:01-03-2021 ರಿಂದ 19-03-2021 ರವರೆಗೆ ರೂ.88.50 ಕೋಟಿಗಳಾಗಿದ್ದು ಒಟ್ಟು ವಸೂಲಾತಿ ರೂ.86.55 ಕೋಟಿಗಳಾಗಿದ್ದು, ಬಾಕಿ ಮೊತ್ತ ರೂ.1.95 ಕೋಟಿಗಳು ಇರುವುದಾಗಿ ತಿಳಿಸಿರುತ್ತಾರೆ ಹಾಗೂ ಎಲ್ಲಾ ಢೀ ಫಾಲ್ಟ್‌ರ್ಸ್ ರವರಿಗೆ ನಿಯಮಾನುಸಾರ ನೋಟೀಸ್ ಗಳು ಜಾರಿಯಾಗಿರುವ ಬಗ್ಗೆ ತಿಳಿಸಿರುತ್ತಾರೆ.

**ವಿದ್ಯುತ್:-**

- ಬಿಬಿಎಂಪಿ ಕಛೇರಿಯ ಹಿಂಭಾಗದಲ್ಲಿನ DWCC ಆವರಣದಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸುವ ಬಗ್ಗೆ ಮುಂದಿನ ವಾರದಲ್ಲಿ ಬಿಬಿಎಂಪಿ ರವರಿಗೆ ಡಿಮೆಂಡ್ ನೋಟಿಸ್ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಹಾಗೂ ಹಾಲಿ ರಸ್ತೆಗಳಲ್ಲಿ ಇರುವ ಎಲ್ಲಾ ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ ಯು.ಜಿ ಕೇಬಲ್ ಹಾಕಲು ಈಗಾಗಲೇ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ಬೆಸ್ಕಾಂ ಅಭಿಯಂತರರು ರವರು ಸಭೆಗೆ ತಿಳಿಸಿದರು.
- ಕಾವೇರಿನಗರ ಮುಂಭಾಗದಲ್ಲಿರುವ ಬಿ.ಆರ್.ಎಂ.ಸಿ.ಎಲ್ ಕಾಮಗಾರಿಯ ಬಳಿ ಬೀದಿ ದೀಪಗಳ ತಂತಿಗಳನ್ನು ಬೆಸ್ಕಾಂ ರವರು ಕಡಿದಿರುವ ಬಗ್ಗೆ ಗುತ್ತಿಗೆದಾರರು ತಿಳಿಸಿರುತ್ತಾರೆ. ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಬೆಸ್ಕಾಂ ಅಭಿಯಂತರರು ರವರು ಸಭೆಗೆ ತಿಳಿಸಿದರು.

**ಸಮಾಜ ಕಲ್ಯಾಣ ಇಲಾಖೆ:-**

- ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನಧೀಕೃತವಾಗಿ ಅರ್ಜಿಗಳನ್ನು ಭರ್ತಿಮಾಡಲು ಹಣ ವಸೂಲು ಮಾಡುತ್ತಿರುವುದು ತಿಳಿದು ಬಂದಿರುವುದಾಗಿ ಸಭೆಯಲ್ಲಿದ್ದ ಸದಸ್ಯರು ತಿಳಿಸಿದ್ದು ಸ್ಪಷ್ಟನೆ ನೀಡಲು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಹಿಂದಿನ ಸಭೆಯಲ್ಲಿ ಸೂಚಿಸಲಾಯಿತ್ತು. ಆದರೆ ಸಮಾಜ ಕಲ್ಯಾಣ ಇಲಾಖೆಯಿಂದ ಯಾರು ಅಧಿಕಾರಿಗಳು ಇದುವರೆಗೂ ಹಾಜರಾಗಿರುವುದಿಲ್ಲ. ಇದರ ಬಗ್ಗೆ ಸ್ಪಷ್ಟನೆ ನೀಡಲು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯವರಿಗೆ ಸೂಚಿಸಲಾಯಿತು.

**ಕಾಮಗಾರಿ ಇಲಾಖೆ:-**

- ವಾರ್ಡ್-82 ಸಂಬಂಧಿಸಿದಂತೆ, ಎಲ್ಲಾ ಲೆಕ್ಕಶೀರ್ಷಿಕೆಯಡಿಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರಣೆಯನ್ನು ಸಭೆಗೆ ನೀಡಿದರು. ಮತ್ತು 2020-21ನೇ ಸಾಲಿನ ಕ್ರಿಯಾ ಯೋಜನೆಯನ್ನು ತಯಾರಿಸುವ ಹಂತದಲ್ಲಿರುವುದರಿಂದ ಅಗತ್ಯವಿರುವ ಕಾಮಗಾರಿಗಳ ಪಟ್ಟಿಯನ್ನು ನೀಡಲು ಅಭಿಯಂತರರು ಕೋರಿದರು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ(BWSSB):-**

- ಕಾವೇರಿನಗರದಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ದೂರಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು BWSSB ರವರಿಗೆ ಸೂಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ನಂ.82, ಗರುಡಚಾರ್‌ಪಾಳ್ಯ

ಅಧ್ಯಕ್ಷರು
ನೋಡಲ್ ಅಧಿಕಾರಿ
ವಾರ್ಡ್ ನಂ.82, ಗರುಡಚಾರ್‌ಪಾಳ್ಯ

**ಪ್ರತಿಯನ್ನು:-**

1. ಮಾನ್ಯ ವಿಶೇಷ ಆಯುಕ್ತರು (ಆಡಳಿತಾ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಮಹೇದವಪುರ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯಕ್ತರು, ಮಹದೇವಪುರ ವಲಯ ರವರ ಅವಗಾಹನೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರಿಗೆ.
5. ಮಾನ್ಯ ಮುಖ್ಯ ಆರೋಗ್ಯಾಧಿಕಾರಿಗಳು, ಮಹದೇವಪುರ ವಲಯ ರವರಿಗೆ
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್/ಕೆರೆ) ರವರಿಗೆ ಸೂಕ್ತ ಕ್ರಮಕ್ಕಾಗಿ.
7. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
8. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರಿಗೆ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮೇಜರ್ ರೋಡ್ಸ್ ರವರಿಗೆ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಂದಾಯ ಅಧಿಕಾರಿ (ಹೂಡಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
11. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ.
12. ವಾರ್ಡ್ ಸಮಿತಿಯ ಸದ್ಯರುಗಳು ಮಾಹಿತಿಗಾಗಿ.
13. ಕಛೇರಿ ಪ್ರತಿ